# ಲಾಯರ್ ಗೆಟಪ್; ಹಾಸ್ಯದ ಟಚಪ್



‘ಯಲಾಕುನ್ನಿ’, ‘ಕೋಣ’ ಸಿನಿಮಾಗಳ ಬಳಿಕ ಇದೀಗ ‘ತೆನಾಲಿ ಡಿ.ಎಲ್‌ಎಲ್.ಬಿ’ ಚಿತ್ರದ ಮೂಲಕ ಪ್ರೇಕ್ಷಕರನ್ನು ನಗಿಸಲು ಸಜ್ಜಾಗಿದ್ದಾರೆ ನಟ ಕೋಮಲ್.

ತಾವು ನಿರ್ವಹಿಸಬೇಕಾದ ಪಾತ್ರಗಳ ಬಗ್ಗೆ ಚೂಸಿಯಾಗಿದ್ದು, ಸ್ಟೋರಿ ಲೈನ್‌ಗೆ ತಕ್ಕಂತೆ ತುಂಬಾ ಜಾಗರೂಕತೆಯಿಂದ ಈ ಕಾಮಿಡಿ ಪಾತ್ರವನ್ನು ಕೈಗೆತ್ತಿಕೊಂಡಿರುವುದಾಗಿಯೂ ಕೋಮಲ್ ತಿಳಿಸಿದ್ದಾರೆ.

‘ಮರೀಚಿ’ ಸಿನಿಮಾ ನಿರ್ದೇಶಿಸಿದ್ದ ಸಿದ್ಧ್ರುವ್ (ಸಿದ್ದು), ಈ ಸಿನಿಮಾ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಸಿನಿಮಾ ಶೀರ್ಷಿಕೆಯಲ್ಲಿಯೇ ಕೋಮಲ್ ಅವರ ಪಾತ್ರ ಕೂಡ ಜಾಹೀರಾಗಿದ್ದು, ಲಾಯರ್ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಆಸಕ್ತಿದಾಯಕ ಅಂಶವೆಂದರೆ, ತೆರೆ ಮೇಲೆ ಮಾತ್ರವಲ್ಲದೆ ನಿಜ ಜೀವನದಲ್ಲಿಯೂ ಕೋಮಲ್ ಎಲ್‌ಎಲ್.ಬಿ ಪದವಿ ಮಾಡಿರುವುದು. ಹೀಗಾಗಿ ಪಾತ್ರವನ್ನು ನಿಖರವಾಗಿ ಪ್ರಸ್ತುತಪಡಿಸಲು ಈ ಅಂಶ ಸಹಾಯಕವೂ ಆಗಲಿದೆ.

ಸಿದ್ಧ್ರುವ್, ಕೋಮಲ್ ಅವರಿಗಾಗಿಯೇ ತಾಜಾ ಕಥೆಯನ್ನು ಹೆಣೆದಿದ್ದು, ಮೇ ತಿಂಗಳಲ್ಲಿ ಚಿತ್ರೀಕರಣ ಆರಂಭವಾಗಲಿರುವುದಾಗಿ ಚಿತ್ರತಂಡ ಮಾಹಿತಿ ನೀಡಿದೆ. ಓದಿನಲ್ಲಿ ಜಸ್ಟ್ ಪಾಸ್ ಆಗಿರುವ ತೆನಾಲಿಯ ವಕೀಲ ವೃತ್ತಿಯಲ್ಲಿನ ಕಥೆ ಇದಾಗಿದೆ. ವಿಚ್ಛೇದನ ಕೊಡಿಸುವ ಲಾಯರ್ ಜೀವನದಲ್ಲೇ ವಿಚ್ಛೇದನದ ಸ್ಥಿತಿ ಬಂದಾಗ ಏನಾಗುತ್ತದೆ ಎನ್ನುವ ಕಥೆ ಸಿನಿಮಾದ ತಿರುಳು.

ಈ ಸಿನಿಮಾ ಜೊತೆಜೊತೆಗೆ ಮತ್ತಷ್ಟು ಚಿತ್ರಗಳು ಕೋಮಲ್ ಕೈಯಲ್ಲಿವೆ. ‘ಸಂಗೀತಾ ಬಾರ್ ಆ್ಯಂಡ್ ರೆಸ್ಟೋರೆಂಟ್’, ‘ರೋಲೆಕ್ಸ್’, ‘ವಾರೆವ್ಹಾ2’ ಸಿನಿಮಾಗಳು ಅವರ ಪಟ್ಟಿಯಲ್ಲಿವೆ.



# ಸ್ಟಾರ್‌ಡಂ ಮೀರಿದ ಕಥೆಗಳ ಆಯ್ಕೆಯಲ್ಲಿ ವಿಜಿ

‘ನಾನು ಸಿನಿಮಾದಲ್ಲಿ ಕೆಲಸಗಾರ, ಹೀರೊ ಅಲ್ಲ. ತೆರೆ ಮೇಲೆ ಮತ್ತಷ್ಟು, ಮಗದಷ್ಟು ಪಾತ್ರಗಳನ್ನು ಮಾಡಬೇಕೆಂಬ ಹಂಬಲವಿದೆ’ ಎಂದಿದ್ದಾರೆ ನಟ ದುನಿಯಾ ವಿಜಯ್.

ಇತ್ತೀಚೆಗೆ ಬಿಡುಗಡೆ ಕಂಡಿರುವ ‘ಲ್ಯಾಂಡ್‌ಲಾರ್ಡ್’ ಸಿನಿಮಾದಲ್ಲಿ ರಾಚಯ್ಯನಾಗಿರುವ ವಿಜಿ, ಪಾತ್ರದೊಂದಿಗೆ, ತಮಗಿರುವ ಒಂದು ಸಂಪರ್ಕ ಕೊಂಡಿಯ ಕುರಿತು ಮಾತನಾಡಿದ್ದಾರೆ. ಸ್ಟಾರ್‌ಡಂ ಮೀರಿದ ಕಥೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಿರುವುದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹಾಗೆಯೇ ‘ಲ್ಯಾಂಡ್‌ಲಾರ್ಡ್’ ಸಿನಿಮಾ ಕೂಡ ಗ್ರಾಮೀಣ ಹಿನ್ನೆಲೆ ಹಾಗೂ ಸಮಾನತೆಯ ಪರಿಕಲ್ಪನೆಯ ಕಾರಣಕ್ಕೇ ತಮ್ಮನ್ನು ಸೆಳೆದಿದ್ದಾಗಿ ಹೇಳಿಕೊಂಡಿದ್ದಾರೆ.

‘‘ಲ್ಯಾಂಡ್‌ಲಾರ್ಡ್’, 80ರ ದಶಕದ ಕಥೆಯಾದರೂ ಇಂದಿಗೂ ಪ್ರಸ್ತುತವಿದೆ. ಈಗ ಯಾಕೆ ಅಂಥ ಕಥೆಗಳನ್ನು ಹೇಳಬಾರದು? ಇತಿಹಾಸವಿಲ್ಲದೆ ಭವಿಷ್ಯವನ್ನು ನೋಡಲು ಸಾಧ್ಯವಿಲ್ಲ. ಇಂದಿನ ಜೆನ್ ಝೀ ಮಕ್ಕಳು ಹಿಂದೆ ತಿರುಗಿ ನೋಡಬೇಕು. ಜನರ ಪರಿಶ್ರಮ, ಕಷ್ಟಗಳು, ಒದ್ದಾಟಗಳು, ಯುದ್ಧಗಳು, ಅವರು ಹಾದುಬಂದ ಹಾದಿಗಳು ಇವರಿಗೆ ಅರ್ಥವಾಗಬೇಕು. ನಾವು ಈ ಕಥೆಗಳನ್ನು ಹೇಳದೇ ಇದ್ದರೆ, ಮುಂದೆ ಯಾರೂ ಹೇಳುವುದಿಲ್ಲ. ಇದು ಒಂದು ದಾಖಲೆಯಾಗಿಯೂ ಉಳಿಯುತ್ತದೆ’’ ಎಂದು ವಿವರಿಸಿದ್ದಾರೆ.

‘ನಾನು ತೆಗೆದುಕೊಳ್ಳುವ ಪ್ರತಿ ಸಿನಿಮಾ ಕೂಡ ಒಂದಲ್ಲಾ ಒಂದು ರೀತಿ ಸಮಾಜದಲ್ಲಿ ಜಾಗೃತಿಯನ್ನು ಮೂಡಿಸುವ ಅಂಶವನ್ನು ಹೊಂದಿರುತ್ತದೆ. ಈಚೆಗೆ ಬಿಡುಗಡೆಯಾಗಿರುವ ಲ್ಯಾಂಡ್‌ಲಾರ್ಡ್ ಕೂಡ ಸಮಾನತೆಯ ವಿಷಯದ ಕುರಿತು ಮಾತನಾಡಿದೆ’ ಎಂದಿದ್ದಾರೆ.

ಸಿನಿಮಾ ತಮ್ಮನ್ನು ಸೆಳೆದ ಬಗ್ಗೆ ವಿವರಿಸುತ್ತಾ, ‘‘ನಾನು ಜಡೇಶ್ ಅವರ ‘ಗುರು ಶಿಷ್ಯರು’ ಸಿನಿಮಾ ನೋಡಿದ್ದೆ. ಅವರು ಕಥೆಯನ್ನು ಬಹಳ ಜಾಗರೂಕವಾಗಿ ಕಟ್ಟುತ್ತಾರೆ. ರಾಚಯ್ಯ ಎಂಬ ಪಾತ್ರದ ಬಗ್ಗೆ ಕೇಳಿದಾಗ ನಾನೂ ಇದರ ಭಾಗವಾಗಬೇಕು ಎನಿಸಿತು’’ ಎಂದು ತಿಳಿಸಿದ್ದಾರೆ.

‘ಯಾವುದೇ ಸಿನಿಮಾದ ಯಶಸ್ಸು ಆ ಸಿನಿಮಾ ನಿರ್ದೇಶಕನದ್ದೇ ಆಗಿರುತ್ತದೆ. ಅವನೇ ಆ ಸಿನಿಮಾಗೆ ಪೋಷಕ. ಹೀಗಾಗಿ ಸಿನಿಮಾದ ಗೆಲುವು ಅವನದ್ದೇ’ ಎಂದೂ ಮಾತು ಸೇರಿಸಿದ್ದಾರೆ.